



## ಜೋಕುಮಾರಸ್ವಾಮಿ ಬಂದ

ಗಣಪತಿ ಹೋದ ನಂತರ ಉತ್ತರ ಕರ್ನಾಟಕದಲ್ಲಿ ಜೋಕುಮಾರಸ್ವಾಮಿ ಬರುತ್ತಾನೆ. ಜೋಕುಮಾರ ಮಳೆ ತರುತ್ತಾನೆಂಬ ನಂಬಿಕೆ ಇದೆ. ಜೋಕುಮಾರನನ್ನು ಹೊತ್ತು ತರುವ ಮಹಿಳೆ ಅವನ ಲೀಲೆಗಳನ್ನು ಕುರಿತು ಹಾಡು ಹಾಡುತ್ತಾರೆ. ಮನೆಮನೆಗೆ ತೆರಳಿ ಅವನಿಗಾಗಿ ಬಟ್ಟೆ–ಬರೆ, ದುಡ್ಡು, ಜೋಳ, ಅಕ್ಕಿ ಸಂಪಾದಿಸುತ್ತಾರೆ. ಇದು ಸುರಪುರದಲ್ಲಿ ಜೋಕುಮಾರನ ಆಗಮನದ ವೈಖರಿ.

–ಶ್ರೀನಿವಾಸ ಜಾಲವಾದಿ, ಸುರಪುರ



## ಹೂವಿನ ಬುಟ್ಟಿಯಲ್ಲ ಬಾವಿ

ದೂರದಿಂದ ನೋಡಿದಾಗ ಹೂವಿನ ಬುಟ್ಟಿ ಹತ್ತಿರ ಹೋಗಿ ನೋಡಿದಾಗ ಬಾವಿ! ಅಚ್ಚರಿಯಾದರೂ ನಿಜ. ಬಂಟ್ವಾಳ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಪ್ರಶಾಂತ ಅವರ ಮನೆಗೆ ಭೇಟಿ ನೀಡಿದಾಗ ಇಂಥ ಅಪರೂಪದ ದೃಶ್ಯ ಕಂಡುಬಂತು. ಬಾವಿಯಲ್ಲಿ ಕಲೆಗಾರರ ಕಲೆ ಅರಳುವ ಬಗ್ಗೆ ಅಚ್ಚರಿ ತಂದಿತು. ಹಿಂದೆ ದೇವಸ್ಥಾನಗಳಿಗೆ ಹೋಗುವಾಗ ಮನೆಯಲ್ಲೇ ಬೆಳೆದ ಹೂವುಗಳನ್ನು ಕಿತ್ತು ಬಳ್ಳಿ ಬುಟ್ಟಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದ ಕಾಲವಿತ್ತು. ಆದರೆ ಇಂದು ಅದರ ಜಾಗವನ್ನು ಪ್ಲಾಸ್ಟಿಕ್ ಬುಟ್ಟಿಗಳು ಆಕ್ರಮಿಸಿವೆ. ಅದರ ನೆನಪನ್ನು ಹೂವಿನ ಬುಟ್ಟಿಯಾಕರದ ಬಾವಿ ನೆನಪಿಸಿತು. ಕಲೆಗಾರರ ಕಲೆಗೆ ಅಭಿನಂದನೆಗಳು.

–ನಿತ್ಯ ಎಸ್. ಮೂಡುಬಿದಿರೆ

## ನಿಲ್ಲು ನಿಲ್ಲೇ ಪತಂಗ

ಮನೆ ಜಗಲಿಯ ಕಟ್ಟೆಯ ಮೇಲೆ ಅನಾಕರ್ಷಕ ಪತಂಗವೊಂದು ಕುಳಿತಿತ್ತು. ನನ್ನ ಬರವಿನಿಂದ ಬೆದರಿ ಹಾರಿಹೋಗಿ ಒಣ ಕಟ್ಟಿಗೆಯ ಮೇಲೆ ರೆಕ್ಕೆಗಳನ್ನು ಹರಡಿ ಕೂತಾಗ ಅದರ ನಿಜವಾದ ಸೌಂದರ್ಯದ ಅನಾವರಣವಾಯಿತು. ಕಾಮನಬಿಲ್ಲಿನ ಬಣ್ಣಗಳೆಲ್ಲವನ್ನೂ ಸೂರೆ ಮಾಡಿ ಸೃಷ್ಟಿಕರ್ತ ಈ ಪತಂಗವನ್ನು ನಿರ್ಮಿಸಿದ್ದಾನೋ ಎಂದು ಅಚ್ಚರಿಯಾಯಿತು.

–ಡಾ. ವೇಣುಗೋಪಾಲ ಶರ್ಮಾ, ದಕ್ಷಿಣಕನ್ನಡ

